ಕಸ್ತೂರ್‌ಬಾ ಹೇಳುತ್ತಾ ಹೋದರು.

'ಬಹುಶಃ ಹೆಂಡ್ತೀಗೇ ಅವಕಾಶ ಕೊಡ್ತಾರೆ ಅಂತ, ನಿಮ್ ಬಗ್ಗೆ ಯಾರಾದ್ರೂ ಏನಾದ್ರೂ ಅಂದ್ಕೊಂಡಾರು ಅನ್ನೋ ಅಳುಕು ನಿಮಗೆ ಇದ್ದಿರಬಹುದು.'

ಗಾಂಧಿ ಅದಕ್ಕೂ ಉತ್ತರಿಸಲಿಲ್ಲ.

ಉತ್ತರವಿದ್ದರೂ ಬಿತ್ತರಗೊಳ್ಳದ ಭಾವ.

ಕಿವಿಯಾಗುವುದರಲ್ಲೇ ಸಮಚಿತ್ತ;

ಎಷ್ಟಾದರೂ ಇದು ನೆನಪಿನ ಬುತ್ತಿ!

'ಅಥವಾ ನನ್ನ ಆರೋಗ್ಯ ಸರಿಯಿರಲಿಲ್ಲ ಅನ್ನೋದು ಕಾರಣ ಇರಬಹುದು.'

ಈಗ ಗಾಂಧಿ ಮಾತಾಡಿದರು, ಕಳಕಳಿಗೆ ಕಣ್ಣಾದರು.

'ನಿನ್ ಆರೋಗ್ಯ ಕೆಟ್ಟಿದ್ದು ನಿಜಾನೆ? ಜೊತೆಗೆ ರಾಮದಾಸ ಹುಟ್ಟಿದ್ದ; ಬೆಳೀತಿದ್ದ ಮಣಿಲಾಲ್ ಅಲ್ಲಿಗೇ ಬಂದಿದ್ದ. ನಿನ್ನ ಜವಾಬ್ದಾರಿ ಜಾಸ್ತಿ ಇತ್ತು.'

'ಹೋರಾಟವೂ ಜವಾಬ್ದಾರಿ ಅಲ್ವ?'

'ಹೌದು. ಆ ಕಾರಣಕ್ಕೇ ನೀನೂ ಭಾಗವಹಿಸು ಅಂತ ಆನಂತರ ಹೇಲ್ದೆ. ಮೂವರು ಹೆಂಗಸರು, ಹನ್ನೆರಡು ಜನ ಗಂಡಸರು ಇದ್ದ ತಂಡದ ಜವಾಬ್ದಾರಿ ವಹಿಸಿದೆ. ನೀವು ನಿಷೇದಾಜ್ಞೆ ಉಲ್ಲಂಘಿಸಿ ಅರೆಸ್ಟ್ ಆದ್ರಿ. ನಿನಗೆ ಮೂರು ತಿಂಗಳು ಜೈಲು ಶಿಕ್ಷೆ ಆಯಿತು. ಅದು ನಡೆದದ್ದು ಯಾವಾಗ ನೆನಪಿದ್ಯ? 1913ನೇ ಇಸವಿ, ಸೆಪ್ಟಂಬರ್ ಹದಿಮೂರು.'

'ಅಲ್ಲಿಂದ ನನ್ನ ದೃಷ್ಟಿ ಬದಲಾಯ್ತು, ಆ ಸೆಪ್ಟಂಬರ್ ನನಿಗ್ ಸ್ಥಿತ್ಯಂತರದ ತಿಂಗಳಾಯ್ತು. ನಿಮ್ ಜೊತೆ ನಾನೂ ಹೋರಾಟದಲ್ಲಿ ಇರ್ಲೇಬೇಕು ಅನ್ನಿಸ್ತು.'

ಗಾಂಧಿ ತಲೆಯಾಡಿಸಿ ಸುಮ್ಮನಾದರು.

ಗಾಂಧಿಯ ಮಾತಿಲ್ಲದೆ ಕಸ್ತೂರ್‌ಬಾ ಏನು ಮಾತಾಡಿಯಾರು?

ಮಾತಿಗೆ ಮಾತು ಬೆಳೆದರೆ ನೆನಪಿನ ಸುರುಳಿ ಬಿಚ್ಚೀತು.

ಹೊರಗೆಲ್ಲ ಒಳಗೆ ಬಂದು ಆಕಾರ ತಾಳಿ ಅಭಿವ್ಯಕ್ತಿಯಾದೀತು.

ಆದರೆ ಈಗ ಗಾಂಧಿ ಮಾತು ಬೆಳೆಸಲಿಲ್ಲ.

ಕಸ್ತೂರ್‌ಬಾಗೆ ಸುಮ್ಮನಿರಲಾಗತ್ತಿಲ್ಲ.

ಕೆಣಕಿ ಕೇಳಿಯೇ ಬಿಟ್ಟರು:

'ಇದ್ದಕ್ಕಿಂದ್ದಂತೆ ಮೌನವಾಗೋದು ನಿಮ್ಮ ಸ್ವಭಾವ ಆಗ್ಬಿಟ್ಟಿದೆ.'

'ಕೆಲವು ಸಾರಿ ಮೌನ ಅನಿವಾರ್ಯ ಕಸ್ತೂರ್.'

'ಅಂದ್ರೆ ಮಾತೆಲ್ಲ ನಮ್ಮಂಥೋರ್ ಮೇಲೇ ಇರ್ಲಿ ಅಂತಾನ?'

'ಛೆ! ಛೆ! ಯಾಕ್ ಹಾಗಂತೀಯ?'

ಕಸ್ತೂರ್‌ಬಾ ತಮಗೆ ತಾವೇ ನಸು ನಕ್ಕರು.

ಗಾಂಧಿಗೆ ಇದು ಸರಿ ಅನ್ನಿಸಲಿಲ್ಲ.

'ಯಾಕ್ ನಕ್ಕೆ? ನನ್ ಮೌನಾನ ಗೇಲಿ ಮಾಡ್ತಿದ್ದೀಯ?'

'ಗೇಲಿ ಮಾಡ್ತಿಲ್ಲ. ಒಮ್ಮೆ ಬೇಲಿ ಹಾಕ್ಕೋತೀರಿ; ಇನ್ನೊಮ್ಮೆ ಬೇಲಿ ಹಾಕ್ತೀರಿ. ಅದು ನೆನಪಿಗೆ ಬಂತು. ಅಷ್ಟೆ.'

'ಅದೇನ್ ಬಿಡಿಸಿ ಹೇಳು. ನಿನಗೆ ನೀನೇ ನಕ್ಕು ಸುಮ್ಮನಾದ್ರೆ ಸಹಿಸೋದು ಕಷ್ಟ.'

'ನಿಮ್ಮ ಮೌನವೂ ಒಮ್ಮೊಮ್ಮೆ ಸಹಿಸೋದು ಕಷ್ಟ ನಮಗೆ, ಅಲ್ವ?'

ಗಾಂಧಿಗೆ ಸಿಟ್ಟುಬಂತು.

ಕೂತಲ್ಲೇ ಚಡಪಡಿಸಿದರು.

'ಹುಟ್ಟುಗುಣ ಸುಟ್ಟರೂ ಹೋಗಲ್ಲ ಅಂತಾರಲ್ಲ ಹಾಗಾಯ್ತು.'

'ಹುಟ್ಟು ಮುಖ್ಯ ಅಲ್ಲ ಅಂತ ತಾನೆ ನಾನೂ ನೀವು ಜಾತಿ ಭೇದ ಬೇಡ ಅಂತ ಹೇಳಿದ್ದು; ಹಾಗೇ ಬದುಕಿದ್ದು.'

ಸೇರಿಗೆ ಸವ್ವಾಸೇರು ಅನ್ನೊ ಸಂವಾದ

ಸಂಘರ್ಷಕ್ಕೆ ತಿರುಗುತ್ತಿರುವ ವಾದ

ವಿವಾದ ಬೇಡ ಎಂದಿತು ಗಾಂಧಿಮನ

ಮತ್ತೆ ಕಸ್ತೂರ್ ಬಾ ಅವರದೇ ಮಾತು.

'ದಕ್ಷಿಣ ಆಫ್ರಿಕಾದಲ್ಲಿ ಆಸ್ಪತ್ರೆ ಸೇರಿದಾಗ ಡಾಕ್ಟರ್ ಹೇಳಿದ್ದು ನೆನಪಿಗೆ ಬಂತು. ಅದಕ್ಕೆ ನಕ್ಕೆ.'

ಆಗ ಗಾಂಧಿ ಮನದಲ್ಲಿ ನೆನಪು;

ಮಂದಹಾಸ ತುಂಬಿದ ಮತಾಪು.

ನಸು ನಕ್ಕರು; ಹಿಂದಕ್ಕೆ ಹೋದರು.

ಕಸ್ತೂರ್ ಬಾ ಕಾಯಿಲೆಬಿದ್ದು ಆಸ್ಪತ್ರೆ ಸೇರಿದ್ದರು. ತಮ್ಮ ಎಲ್ಲ ಕೆಲಸಗಳ ನಡುವೆಯೂ ಗಾಂಧಿ, ಆಸ್ಪತ್ರೆಯಲ್ಲೇ ಇದ್ದು ಪತ್ನಿಯ ಯೋಗಕ್ಷೇಮ ನೋಡಿಕೊಂಡಿದ್ದರು. ಕಸ್ತೂರ್‌ಬಾ ರಕ್ತಹೀನತೆಯಿಂದ ಬಳಲುತ್ತಿದ್ದರು. ಆದ್ದರಿಂದ ಅಲ್ಲಿನ ಡಾಕ್ಟರ್ 'ಚೆನ್ನಾಗ್ ಮಾಂಸ ತಿನ್‌ಬೇಕು ನೀವು' ಎಂದು ಸಲಹೆ ಮಾಡಿದರು, ಅದೂ ದನದ ಮಾಂಸ! ಅಲ್ಲಿ ಅದೇ ಪ್ರಸಿದ್ಧಿ! ಕಸ್ತೂರ್‌ಬಾ ಕಂಗಾಲಾದರು. ಗಾಂಧಿ ಮೌನವಾದರು. ಡಾಕ್ಟರ್ ಗಾಂಧಿಯವರಿಗೂ ಈ ವಿಷಯ ಹೇಳಿದಾಗ ಯಾವ ನಿರ್ಧಾರವನ್ನೂ ತೆಗೆದುಕೊಳ್ಳಲಿಲ್ಲ. ಆಗಲಿ ಅಥವಾ ಆಗೊಲ್ಲ ಎಂದು ಹೇಳಲಿಲ್ಲ. ಆದರೆ ಕಸ್ತೂರ್‌ಬಾ ಸಾವರಿಸಿಕೊಂಡು ಖಡಾಖಂಡಿತವಾಗಿ ಹೇಳಿದರು: 'ನಾನು ಮಾಂಸಾಹಾರಿ ಅಲ್ಲ. ಅದನ್ನ ಮುಟ್ಟೋದೂ ಇಲ್ಲ. ನೀವೇನಾದ್ರೂ ಒತ್ತಾಯ ಮಾಡಿದ್ರೆ ನಾನಿಲ್ಲಿರೊಲ್ಲ. ಈಗ್ಲೇ ಮನೇಗ್ ಕಳ್ಸಿ' ಎಂದರು. ಮುಂದೆ ಡಾಕ್ಟರ್ ಒತ್ತಾಯಿಸಲಿಲ್ಲ.

ಗಾಂಧಿಗೆ ಇದೆಲ್ಲ ನೆನಪಾಯಿತು.

'ಆದರೆ ಇದರಲ್ಲಿ ನಗುವಂಥದು ಏನಿದೆ?'

ಅದನ್ನೇ ಕಸ್ತೂರ್‌ಬಾಗೆ ಕೇಳಿದರು.

'ಸರಿಯಾದ್ ಸಮಯಕ್ ಮೌನ ವಹಿಸಿದ್ರಲ್ಲ. ನಿಮ್ಮ ಮೌನ ನೆನಪಿಸ್ಕೊಂಡು ನಗು ಬಂತು. ಅಷ್ಟೇ' ಎಂದರು ಕಸ್ತೂರ್‌ಬಾ — ನಿರಾಳ ಭಾವದಿಂದ.

ಸರಿ, ಮಾತು ಬೆಳೆಸೋದು ಬೇಡ ಅಂತ ಗಾಂಧಿ;

ನೆನಪು ಹೇಳದೇ ಇರಲಾರೆ ಅಂತ ಕಸ್ತೂರ್‌ಬಾ;

'ಆದ್ರೆ ಅಲ್ಲಿ ನಿಮ್ ಗುಮಾಸ್ತೆ ವಿಷಯದಲ್ಲಾದ ಗಲಾಟೆ ಮರ್‍ಯೋಕೇ ಆಗ್ತಿಲ್ಲ.'

'ಯಾವ್ ಗುಮಾಸ್ತೆ? ದಕ್ಷಿಣ ಆಫ್ರಿಕಾದಲ್ಲಿ ನನ್ನ ಮನೇಲೆ ಇದ್ದ ವಿನ್ಸೆಂಟ್‌ಲಾರೆನ್ಸ?'

'ಹೌದು. ಆ ಗುಮಾಸ್ತೆ ವಿಷಯಕ್ಕೆ ನನ್ನನ್ನು ಮನೆಯಿಂದ ಹೊರಗ್ ಹಾಕೋಕೂ ಸಿದ್ಧವಾಗಿದ್ರಿ? ಆಗ ನಾನು ತುಂಬು ಗರ್ಭಿಣಿ.'

ಆತನ ವಿಷಯ ನಿಮಿತ್ತ ಮಾತ್ರ. ಅಲ್ಲಿ ನನ್ನ ನೀತಿ ನಿಲುವಿನ ವಿಷಯ ಇತ್ತು.

ಈಗ ಕಸ್ತೂರ್ ಮೌನದ ಸರದಿ; ಮನದಲ್ಲಿ ಬಿಚ್ಚಿಕೊಂಡ ಪ್ರಸಂಗ.

ಗೃಹಭಂಗ; ಮನಭಂಗ!

ಮನೆಯಲ್ಲೇ ಕಚೇರಿಯಾಗಿದ್ದ ಒಂದು ಕೋಣೆ. ಗಾಂಧಿಯವರಿಗೆ ಸಹಾಯಕನಾಗಿದ್ದ ವಿನ್ಸೆಂಟ್. ಗಾಂಧಿ ಹೇಳಿದ್ದನ್ನು ಬರದುಕೊಳ್ಳುತ್ತಿದ್ದ. ಆನಂತರ ದಕ್ಷಿಣ ಆಫ್ರಿಕಾದಲ್ಲಿ ಗಾಂಧಿಯವರ ಪಾತ್ರ ಕುರಿತು ಹೊಗಳತೊಡಗಿದ.

'ಹೊಗಳಿಕೆ ಸಾಕು. ನಮ್ ಜವಾಬ್ದಾರಿ ಅಂತ ಹೋರಾಟ ಮಾಡ್ತಿರೋದು. ಬಿಳಿಯರ ವರ್ಣದ್ವೇಷ, ಜನಾಂಗ ದ್ವೇಷಾನ ವಿರೋಧಿಸ್ಲೇಬೇಕು' ಎಂದು ಗಾಂಧಿ ಹೇಳಿದಾಗ ಆತ ಓದಿನಲ್ಲಿ ಮುಳುಗಿದ. ಗಾಂಧಿಯೇ ಹೀಗೆ. ಹೊಗಳಿಕೆಯನ್ನು ನಿರೀಕ್ಷಿಸಿ ಕೆಲಸ ಮಾಡಿದೋರಲ್ಲ. ಮನಸ್ಸಿಗೆ ಬಂದಮೇಲೆ ಮುಗೀತು. ಏನೇ ಕಷ್ಟ ಎದುರಾದರೂ ಗುರಿಮುಟ್ಟದೆ ನಿಲ್ಲಲಾರೆ ಎಂಬ ದಿಟ್ಟ ನಡಿಗೆಯ ನೇತಾರ. ಆದ್ದರಿಂದಲೇ ಅಲ್ಲಿ ಅನೇಕರಿಗೆ ಅಚ್ಚುಮೆಚ್ಚು.

ಅದನ್ನೇ ವಿನ್ಸೆಂಟ್ ವ್ಯಕ್ತಪಡಿಸಿದ್ದ. ಗಾಂಧಿ ಒಂದೇ ಮಾತಿನಲ್ಲಿ ತಡೆದಿದ್ದರಿಂದ ಸ್ವಲ್ಪ ನಿರಾಶೆಯೂ ಆಗಿತ್ತು. ಪುಸ್ತಕದಲ್ಲಿ ಕಣ್ಣಾಡಿಸುತ್ತಿದ್ದವನು ಎದ್ದ. ಗಾಂಧಿ 'ಎಲ್ಲಿಗೆ?' ಎಂದರು. ಮಲ ವಿಸರ್ಜನೆಗೆಂದು ಹೇಳಿ ಹೊರಟ.

ಆತ ಹೋದ ಕೂಡಲೇ ಗಾಂಧಿಗೆ ನೆನಪಾಯಿತು — ಕಸ್ತೂರ್ ಈತನ ಮಲದ ಕೊಡ ಚೊಕ್ಕಟ ಮಾಡುತ್ತಿಲ್ಲ — ಎಂಬ ವಿಷಯ. ತಕ್ಷಣ ಕಸ್ತೂರ್‌ಬಾನ ಕರೆದರು. ಕಸ್ತೂರ್‌ಬಾ ಕೋಣೆಗೆ ಬಂದು ನಿಂತ ಕೂಡಲೇ ಕೇಳಿದರು:

'ಆತನ ಮಲಮೂತ್ರದ ಕೊಡ ನೀನೇ ಚೊಕ್ಕಟ ಮಾಡ್‌ಬೇಕು ಅಂತ ಹೇಳಿರ್‍ಲಿಲ್ವ?'

'ಹೇಳಿದ್ರಿ.'

'ಮತ್ತೆ ಯಾಕ್ ಮಾಡ್ತಿಲ್ಲ ನೀನು?'

'ಯಾರ್ ಯಾರ್‍ದೊ ಮಲ ತೊಳ್ಯೊ ಕೆಲ್ಸ ನಾನ್ ಮಾಡಲ್ಲ.'

'ಯಾರ್ ಯಾರೋ ಅಂತ ಅನ್‌ಬೇಡ ಆತನ್ನ. ಆತ ನಮ್ಮ ಮನೆ ಅತಿಥಿ.'

'ಅತಿಥಿ ಅಂತ ಅಸ್ಪೃಶ್ಯರ ಮಲಮೂತ್ರಾನೂ ನಾನ್ ಚೊಕ್ಕಟ ಮಾಡ್ಬೇಕ?'

'ಆತ ಕ್ರಿಶ್ಚಿಯನ್ ಕಸ್ತೂರ್.'

'ಕ್ರಿಶ್ಚಿಯನ್ ಆಗೋಕ್ ಮುಂಚೆ?'

'ಮುಂಚೆ ಆತ ಅಸ್ಪೃಶ್ಯ ನಿಜ. ಆದ್ರೆ ಅಸ್ಪೃಶ್ಯರ ಸೇವೇನ ದೇವರ ಸೇವೆ ಅಂತ ತಿಳ್ಕೋಬೇಕು.'

'ಹಾಗಂತ ನೀವೇ ತಿಳ್ಕೊಂಡು, ನೀವೇ ಚೊಕ್ಕಟ ಮಾಡಿ.'

ಗಾಂಧಿಗೆ ಸಿಟ್ಟುಬಂತು.

ತನ್ನ ಎದೆಗೆ ಇರಿದ ಮಾತು.

'ಬಾಯಿಗ್ ಬಂದಂಗ್ ಮಾತಾಡ್‌ಬೇಡ.'

'ನೀವೂ ಅಷ್ಟೇ. ಸೇವೇನ ಸರ್ವಾಧಿಕಾರ ಮಾಡ್‌ಬೇಡಿ.'

'ಕಸ್ತೂರ್!' — ಗಾಂಧಿ ಹಲ್ಲು ಕಚ್ಚಿ ಕೆರಳಿದರು.

(ಸಶೇಷ)